ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 18.06.2025.

**ಮುಂದುವರೆದ ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ದಾವಾ ಆಸ್ತಿಗೆ ವರ್ಧಮಾನ ಇವರ ಹೆಸರು ಯಾವ ವರ್ಷದಲ್ಲಿ ದಾಖಲಾಗಿದೆ ಅಂತಾ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಗೆ ವರ್ಧಮಾನ ತಂದೆ ಮರಣ ಹೊಂದಿದ ನಂತರ ವರ್ಧಮಾನ ಹೆಸರು ದಾಖಲಾಗಿದೆ ಅಂದರೆ ಸರಿ. ವರ್ಧಮಾನ ತಂದೆ ನಾಗೇಂದ್ರಪ್ಪ ಏಷ್ಟು ವರ್ಷದ ಹಿಂದೆ ಮರಣ ಹೊಂದಿದ್ದಾನೆ ಅಂತಾ ನನಗೆ ಗೊತ್ತಿಲ್ಲಾ. ನಾಗೇಂದ್ರಪ್ಪ ಮರಣ ಹೊಂದಿದ ನಂತರ ವರ್ಧಮಾನ ಹೆಸರು ದಾಖಲು ಮಾಡಲು ಯಾರು ಅರ್ಜಿ ಕೊಟ್ಟಿದ್ದರು ಅಂತಾ ನನಗೆ ನೆನಪಿಲ್ಲಾ. ಸುಂದ್ರಮ್ಮ ಮತ್ತು ಅವರ ತಾಯಿ ಆಸ್ತಿ ವರ್ಧಮಾನ ಇವರ ಹೆಸರಿಗೆ ಬಿಟ್ಟು ಕೊಟ್ಟ ಬಗ್ಗೆ ಯಾವುದೇ ದಾಖಲೆ ನಾನು ನೋಡಿರುವುದಿಲ್ಲಾ. ನಾಗೇಂದ್ರಪ್ಪನ ಹೆಂಡತಿ ಮತ್ತು ಮಗಳು ಸದರಿ ಆಸ್ತಿ ಪಿತ್ರಾರ್ಜಿತ ಇರುವುದರಿಂದ ತಮ್ಮ ಹಕ್ಕನ್ನು ಯಾವತ್ತೂ ವರ್ಧಮಾನನಿಗೆ ಬಿಟ್ಟು ಕೊಟ್ಟಿಲ್ಲಾ ಎಂದರೆ ಸರಿಯಲ್ಲಾ. ದಾವಾ ಆಸ್ತಿ ವರ್ಧಮಾನ ಇವರಿಗೆ ಬಿಟ್ಟುಕೊಟ್ಟ ಬಗ್ಗೆ ದಾಖಲೆ ಹಜರುಪಡಿಸಿದ್ದೇನೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಮೊದಲು ಖರೀದಿ ವ್ಯವಹಾರ ಆದ ಸಮಯದಲ್ಲಿ ಊರಿನ ಪಂಚರಾದ ಬಸವಣ್ಣೆಪ್ಪ ಚಿಕ್ಕಣಗಿ ಇವರ ಸಮಕ್ಷಮ ಆಗಿರುತ್ತದೆ. ಸದರಿ ಖರೀದಿ ವ್ಯವಹಾರ ನಡೆಯುವಾಗ ನಾನು ಹಾಜರಿರುತ್ತೇನೆ. ಸದರಿ ದಾವಾ ಆಸ್ತಿಯನ್ನು ವರ್ಧಮಾನ ಮಾರಾಟ ಮಾಡುತ್ತಿದ್ದನು. ವರ್ಧಮಾನ ಗೊಂಜಾಳ ವ್ಯಾಪಾರ ಮಾಡಿ ಸಾಲ ಮಾಡಿಕೊಂಡಿದ್ದರಿಂದ ಖರೀದಿಗೆ ಜಮೀನನ್ನು ಹಚ್ಚಿದ್ದನು. ಸದರಿ ಖರೀದಿ ಸಂಚಕಾರ ಪತ್ರ ನನ್ನ ತಂದೆಯ ಹೆಸರಿಗೆ ಆಗಿರುತ್ತದೆ. ಸದರಿ ಖರೀದಿ ಸಂಚಕಾರ ಬಸವಣ್ಣೆಪ್ಪ

ಬಣಕಾರ ಇವರ ಮನೆಯಲ್ಲಿ ನಡೆದಿರುತ್ತದೆ. ಸದರಿ ಸಮಯದಲ್ಲಿ ನನ್ನ ವಯಸ್ಸು 18 ಇರುತ್ತದೆ. 1999 ರಲ್ಲಿ ಖರೀದಿ ಸಂಚಕಾರ ಆಗಿರುತ್ತದೆ ಆದರೆ ದಿನಾಂಕ ಹೇಳಲು ಬರುವುದಿಲ್ಲಾ ಆದರೆ ತಿಂಗಳು 8 ನೇ ತಿಂಗಳು ಇರುತ್ತದೆ. ಸದರಿ ದಿನ ಸೋಮವಾರ ಇರುತ್ತದೆ. ಸದರಿ 8 ನೇ ತಿಂಗಳು ಯಾವುದೇ ಖರೀದಿ ವ್ಯವಹಾರ ಆಗದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ. ಸದರಿ ಖರೀದಿ ಸಂಚಕಾರ ವ್ಯವಹಾರಕ್ಕೆ ಮುಂಜಾನೆ 10.00 ಘಂಟೆಗೆ ಕೂಡಿದ್ದರು. ಸದರಿ ವ್ಯವಹಾರಕ್ಕೆ  ವರ್ಧಮಾನ ಜನರನ್ನು ಕುಡಿಸಿರುತ್ತಾನೆ. ಸದರಿ ಖರೀದಿ ವ್ಯವಹಾರಕ್ಕೆ 22 ಜನ ಹಾಜರಿದ್ದರು. ಸದರಿ ಜನರ ಹೆಸರು ಅಪ್ಪಣ್ಣ ಜೀನರ, ಫಕ್ಕೀರಯ್ಯ ಹಿರೇಮಠ, ನಾಗಪ್ಪ ಕಾಸಂಬಿ, ಹನುಮಂತಪ್ಪ ಮೋಕಾಶಿ, ಪೊಮ್ಮಣ್ಣ ಮೂಲಿಕೇರಿ, ವರ್ಧಮಾನಪ್ಪ, ಧರಣೆಪ್ಪ ಮಾಸಣಗಿ ಮತ್ತು ಇತರರು ಇದ್ದರು. ಸದರಿ ಖರೀದಿ ವ್ಯವಹಾರಕ್ಕೆ ಮುಖ್ಯ ವ್ಯವಹಾರಕ್ಕೆ ಬಸವಣೆಪ್ಪ ಚಿಕ್ಕಣಗಿ ಇದ್ದರು. ವರ್ಧಮಾನ 1 ಲಕ್ಷ ಖರೀದಿ ಹಣ ಹೇಳಿರುತ್ತಾನೆ. ನಮ್ಮ ತಂದೆ 50 ಸಾವಿರಕ್ಕೆ ಕೇಳಿದ್ದು ನಂತರ 71 ಸಾವಿರಕ್ಕೆ ಖರೀದಿ ಹಿಡಿದಿರುತ್ತಾರೆ. ಸದರಿ ಖರೀದಿ ವ್ಯವಹಾರ ಮಧ್ಯಾಹ್ನ 1.00 ಘಂಟೆಗೆ ಮುಗಿದಿರುತ್ತದೆ. ಸದರಿ ಖರೀದಿ ವ್ಯವಹಾರಕ್ಕೆ ಶಾಂತಮ್ಮ, ಸುಂದ್ರಮ್ಮ, ಪದ್ದಮ್ಮ ಹಾಜರಿದ್ದರು. ಸದರಿ ದಿನ ಸಂಚಕಾರ ಪಾವತಿ ದಾಖಲೆ ಮಾಡಿರುತ್ತಾರೆ. ಸದರಿ ಖರೀದಿ ವ್ಯವಹಾರ 50 ರೂಪಾಯಿ ಸ್ಟ್ಯಾಂಪಿನ ಮೇಲೆ ಬರೆದಿರುತ್ತಾರೆ. ಸದರಿ ಸ್ಟ್ಯಾಂಪನ್ನು ನಮ್ಮ ತಂದೆ ತಂದಿರುತ್ತಾರೆ. ಸದರಿ 50 ರೂಪಾಯಿ 6 ಪ್ರತಿಗಳು ಇದ್ದವು. ಸದರಿ ಸ್ಟ್ಯಾಂಪಗಳು 50 ರೂಪಾಯಿ ಮತ್ತು 100 ರೂಪಾಯಿಗಳು ಬೆಲೆಬಾಳುವ ಸ್ಟ್ಯಾಂಪಗಳು ಇದ್ದವು. ಸದರಿ ಏಷ್ಟು ಮುಖಬೆಲೆ ಇದ್ದವು ನನಗೆ ಗೊತ್ತಿಲ್ಲಾ. ಸದರಿ ಸ್ಟ್ಯಾಂಪಗಳನ್ನು ಖರೀದಿ ಸಂಚಕಾರ ಆಗುವ ದಿನವೇ ತಂದಿರುತ್ತಾರೆ. ಸದರಿ ಖರೀದಿ ಸಂಚಕಾರ

ಬಸವಣೆಪ್ಪ ಬರೆದಿರುತ್ತಾರೆ. ಸದರಿ ಖರೀದಿ ಸಂಚಕಾರ ಬರೆಯಲು ವರ್ಧಮಾನ ಮಾಹಿತಿ ನೀಡಿರುತ್ತಾರೆ. ಸದರಿ ದಿನ ವರ್ಧಮಾನ ಇವರಿಗೆ 71 ಸಾವಿರ ನಮ್ಮ ತಂದೆ ನೀಡಿರುತ್ತಾರೆ. ಸದರಿ 71 ಸಾವಿರ 100 ರೂ ಮುಖಬೆಲೆಯ ನೋಟುಗಳು ಇದ್ದವು. ಸದರಿ ಸಂಚಕಾರ ಪತ್ರ ಆದ ದಿನ ನೋಂದ ಮಾಡಲು ಕೇಳಿದಾಗ ವರ್ಧಮಾನ ಇವರು 4-5 ದಿನಗಳಲ್ಲಿ ಖರೀದಿ ಮಾಡಿಕೊಳ್ಳಿ ಅಂತಾ ಹೇಳಿರುತ್ತಾರೆ. ನಂತರ 4-5 ದಿನ ಬಿಟ್ಟು ಖರೀದಿ ಮಾಡಿಕೊಡಲು ಕೇಳಿದಾಗ ಖರೀದಿ ಮಾಡಿಕೊಟ್ಟಿರುವುದಿಲ್ಲಾ.

ಸುಂದ್ರಮ್ಮ ವ್ಯವಹಾರ ಮುಗಿದ ನಂತರ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಿದ್ದಳು. ಸುಂದ್ರಮ್ಮ ಇವಳನ್ನು ಖರೀದಿ ವ್ಯವಹಾರ ನೋಂದಮಾಡಲು ಕೇಳಿದಾಗ ಮಾಡಿಕೊಡುತ್ತೇನೆ ಅಂತಾ ಹೇಳಿದಳು ನಂತರ ಖಾತೆ ಮಾಡುವಾಗ ಕೊಡುತ್ತೇನೆ ಅಂತಾ ಹೇಳಿರುತ್ತಾರೆ. ಸುಂದ್ರಮ್ಮ ಇವಳು ಮತ್ತೆ ಹಣ ಕೊಡುವುದು ಬಾಕಿ ಇದೆ ಅಂತಾ ಹೇಳಿದಾಗ 16 ಸಾವಿರ 1 ವರ್ಷ ಆದ ಮೇಲೆ ಕೊಟ್ಟಿರುತ್ತೇವೆ. ನಂತರ 1 ವರ್ಷ ಆದ ಮೇಲೆ ಖರೀದಿ ಮಾಡಿಕೊಡಲು ಕೇಳಿದಾಗ ಕೊಡುತ್ತೇನೆ ಅಂತಾ ಒಂದು ಕಾಗದ ಮಾಡಿ ಸಹಿ ಮಾಡಿ ಕೊಟ್ಟಿರುತ್ತಾರೆ. ನಮ್ಮ ತಂದೆಯ ಹೆಸರಿಗೆ ಆದ ಸಂಚಕಾರ ಪತ್ರಕ್ಕೆ ಬಸವಣ್ಣೆಪ್ಪ ಚಿಕ್ಕಣಗಿ, ಫಕ್ಕೀರಯ್ಯ ಹಿರೇಮಠ, ನಾಗಪ್ಪ ಕಾಸಂಬಿ, ಜಯಪ್ಪ ಅಪ್ಪಣ್ಣನವರ ಸಹಿ ಮಾಡಿರುತ್ತಾರೆ. ಬಸವಣ್ಣೆಪ್ಪ ಸಂಚಕಾರ ಬರೆದ ಬಗ್ಗೆ ಸಹಿ ಮಾಡಿರುತ್ತಾನೆ. ಸಂಚಕಾರ ಪತ್ರವನ್ನು ಬಸವಣ್ಣೆಪ್ಪ ಬರೆದಿಲ್ಲಾ ಮತ್ತು ಸಹಿ ಮಾಡಿಲ್ಲಾ ಅಂದರೆ ಸರಿಯಲ್ಲಾ. ಸಂಚಕಾರ ಪತ್ರವನ್ನು ನಾವು ಹುಟ್ಟಿಸಿಕೊಂಡಿದ್ದು ಎಂದು ಹಣ ಕೊಟ್ಟಿಲ್ಲಾ ಎಂದರೆ ಸರಿಯಲ್ಲಾ. ಸಂಚಕಾರ ಪತ್ರಕ್ಕೆ ವರ್ಧಮಾನ ಸಹಿ ಮಾಡಿಲ್ಲಾ ಅಂದರೆ ಸರಿಯಲ್ಲಾ. ಸದರಿ 2 ನೇ ಕಾಗದ ಬಣಕಾರ ಇವರ ಮನೆಯಲ್ಲಿ ಆಗಿರುತ್ತದೆ. ಸದರಿ ದಿನ 10 ರಿಂದ 12 ಜನ ಕುಡಿದ್ದರು.

ಸದರಿ ದಿನ ಸುಂದ್ರಮ್ಮ, ಶಾಂತಮ್ಮ, ಪದ್ದಮ್ಮ ಹಾಜರಿದ್ದರು. ನಮ್ಮ ತಂದೆಯ ಹೆಸರಿಗೆ ಆದ ಸಂಚಕಾರ ಪತ್ರಕ್ಕೆ ಸುಂದ್ರಮ್ಮ, ಶಾಂತಮ್ಮ, ಪದ್ದಮ್ಮ ಸಹಿ ಮಾಡಿರುವುದಿಲ್ಲಾ. 2 ನೇ ಸಲ ಸಂಚಕಾರ ಪತ್ರವನ್ನು ಹನುಮಂತಪ್ಪ ಕರಡೇರ ಬರೆದಿರುತ್ತಾರೆ. 2 ನೇ ಪತ್ರಕ್ಕೆ ಸುಂದ್ರಮ್ಮ ಹೆಚ್ಚಿಗೆ ಹಣ ಬೇಕು ಅಂತಾ ಕೇಳಿರುತ್ತಾರೆ. ಪಂಚರು ಮೊದಲಿಗೆ ಎಲ್ಲಾ ಹಣ ಕೊಟ್ಟಿದೆ ಖರೀದಿ ಮಾಡಿಕೊಡು ಅಂತಾ ಕೇಳಿದಾಗ ಸುಂದ್ರಮ್ಮ ಇನ್ನೂ ಹಣ ಕೇಳಿದಾಗ 16 ಸಾವಿರ ಕೊಟ್ಟಿರುತ್ತೇವೆ. 2 ನೇ ಸಂಚಕಾರ ಪತ್ರವನ್ನು ಸ್ಟ್ಯಾಂಪಿನ ಮೇಲೆ ಬರೆದಿರುತ್ತಾರೆ. 2 ನೇ ಸಂಚಕಾರ ಪತ್ರವನ್ನು ಬಿಳಿಹಾಳೆಯ ಮೇಲೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕಾಗದಕ್ಕೆ ಹನುಮಂತಪ್ಪ ಕರಡೇರ, ಮಂಜಪ್ಪ ಬಿದರಗೇರಿ, ಪೊಮ್ಮಣ್ಣ ಮನ್ನಿಕೇರಿ, ಫಕ್ಕೀರಯ್ಯ ಹಿರೇಮಠ ಸಹಿ ಹಾಕಿರುತ್ತಾರೆ. 2 ನೇ ಕಾಗದಕ್ಕೆ ಹನುಮಂತಪ್ಪ ಬರೆದ ಬಗ್ಗೆ ಸಹಿ ಮಾಡಿರುತ್ತಾನೆ. 2 ನೇ ಕಾಗದವನ್ನು ಹನುಮಂತಪ್ಪ ಕರಡೇರ ಬರೆದಿಲ್ಲಾ ಮತ್ತು ಸಹಿ ಮಾಡಿಲ್ಲಾ ಅಂದರೆ ಸರಿಯಲ್ಲಾ. 2 ನೇ ಕಾಗದಕ್ಕೆ ಸುಂದ್ರಮ್ಮ ಸಹಿ ಮಾಡಿರುತ್ತಾರೆ. 2 ನೇ ಕಾಗದಕ್ಕೆ ಸಹಿ ಮಾಡಿದ್ದನ್ನು ನಾನು ನೋಡಿದ್ದೇನೆ. 2 ನೇ ಕಾಗದಪತ್ರ ಆದ ಮೇಲೆ 4-5 ಸಲ ಖರೀದಿ ಮಾಡಿಕೊಡಲು ಕೇಳಿದಾಗ 1 ಎಕರೆ ಬಿಟ್ಟು ಕೊಡುತ್ತೇವೆ ಮತ್ತು ಖಾತೆ ಮಾಡಿಸುತ್ತೇವೆ ಅಂತಾ ಹೇಳಿರುತ್ತಾರೆ. 2 ನೇ ಕಾಗದ ಪತ್ರದಲ್ಲಿ ಖಾತೆ ಮಾಡಿಸಿ ನೋಂದ ಮಾಡಿಸಿಕೊಡುತ್ತೇನೆ ಅಂತಾ ಬರೆದಿರುತ್ತಾರೆ. 2 ನೇ ಕಾಗದಪತ್ರದಲ್ಲಿ ಖಾತೆ ಮಾಡಿಸಿ ನೋಂದಮಾಡಿಕೊಡುತ್ತೇನೆ ಅಂತಾ ಹೇಳಿಲ್ಲಾ ಮತ್ತು ಸುಂದ್ರಮ್ಮ ಸಹಿ ಮಾಡಿಲ್ಲಾ ಅಂದರೆ ಸರಿಯಲ್ಲಾ. 2 ನೇ ಕಾಗದ ಆದ ಮೇಲೆ ಸುಂದ್ರಮ್ಮ ಮತ್ತು ಅವರ ಮಕ್ಕಳಿಗೆ ನೋಟಿಸ ನೀಡಿರುತ್ತೇವೆ. 2 ನೇ ಕಾಗದ ಆದ ನೋಟಿಸ ಯ್ಯಾವಾಗ ಕೊಟ್ಟಿದ್ದೇವೆ ಅಂತಾ ನಮ್ಮ ತಂದೆಗೆ ಗೊತ್ತು. ಇಲ್ಲಿಯವರೆಗೆ ಸುಂದ್ರಮ್ಮ ಇವರು ಖಾತೆ

ಮಾಡಿಕೊಂಡಿರುವುದಿಲ್ಲಾ. ನಾನು ಇಲ್ಲಿಯವರೆಗೆ ಖರೀದಿ ಮಾಡಿಕೊಡಲು ನೋಟಿಸ ನೀಡಿರುವುದಿಲ್ಲಾ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಆದೇಶಿಸಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.